# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1116 |
| 2 | ಸದಸ್ಯರ ಹೆಸರು | : | ಶ್ರೀ ಟಿ.ಎನ್.ಜವರಾಯಿ ಗೌಡ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 21–08–2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗಿನ ಉತ್ತರ–ದಕ್ಷಿಣ ಕಾರಿಡಾರ್ ಸುರಂಗ ರಸ್ತೆ ನಿರ್ಮಿಸಲು ಯೋಜನೆಯನ್ನು ರೂಪಿಸಲಾಗಿದೆಯೇ; ಹಾಗಿದಲ್ಲಿ, ಇದರ ಸಂಪೂರ್ಣ ಮಾಹಿತಿಯೊಂದಿಗೆ ವಿವರಣೆ ನೀಡುವುದು; | • ಹೌದು.<br>• ವಿವರ ಈ ಕೆಳಕಂಡಂತಿದೆ:<br>**ಉತ್ತರ–ದಕ್ಷಿಣ:** Design and Construction of 3-Lane Underground Twin Tunnel Road from Hebbal Esteem Mall junction (Km. 0+000) to Silk Board KSRP Junction (Km.16+745) along with 3-lane/2-lane entry & exit ramps including operation and maintenance in Bengaluru City (North South Corridor) – on MODIFIED BOOT MODE. |
| ಆ) | ಕೆ.ಆರ್.ಪುರದಿಂದ ನಾಯಂಡಹಳ್ಳಿವರೆಗೆ ಪೂರ್ವ–ಪಶ್ಚಿಮ ಕಾರಿಡಾರ್ ಸುರಂಗ ರಸ್ತೆಯನ್ನು ನಿರ್ಮಿಸಲು ಯೋಜನೆಯನ್ನು ತಯಾರಿಸಲಾಗಿದೆಯೇ; ಹಾಗಿದಲ್ಲಿ, ಇದರ ಸಂಪೂರ್ಣ ಮಾಹಿತಿಯೊಂದಿಗೆ ವಿವರಣೆ ನೀಡುವುದು; | • ಪೂರ್ವ–ಪಶ್ಚಿಮ ಕಾರಿಡಾರ್: Construction of underground vehicular tunnel from KR Puram to Nice road Junction Nayandahalli ಯೋಜನೆಯು ಡಿಪಿಆರ್ ತಯಾರಿಕೆ ಹಂತದಲ್ಲಿದೆ. |
| ಇ) | ಈ ಎರಡು ಯೋಜನೆಗಳಿಗೆ ಒಟ್ಟು ಅಂದಾಜಿಸಲಾಗಿರುವ ಒಟ್ಟು ರೂ. ಮೊತ್ತವೆಷ್ಟು, ಈ ಹಣವನ್ನು ಯಾವ ಮೂಲದಿಂದ ಭರಿಸಲಾಗುತ್ತಿದೆ; (ವಿವರ ನೀಡುವುದು) | ❖ ಉತ್ತರ ದಕ್ಷಿಣ ಕಾರಿಡಾರ್ ಯೋಜನೆಗೆ ಡಿ.ಪಿ.ಆರ್ ಅನ್ವಯ ಅಂದಾಜು ವೆಚ್ಚ ರೂ.17780.00 ಕೋಟಿಗಳು (ಜಿ.ಎಸ್.ಟಿ ಒಳಗೊಂಡಂತೆ).<br>▪ ಉತ್ತರ ದಕ್ಷಿಣ ಕಾರಿಡಾರ್ ಯೋಜನೆಯನ್ನು Modified BOOT ಆಧಾರದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದ್ದು, ಶೇ.60 ರಷ್ಟನ್ನು ಖಾಸಗಿ ಪಾಲುದಾರರಿಂದ ಹೂಡಿಕೆಗೆ ಉದ್ದೇಶಿಸಲಾಗಿದೆ.<br>▪ ಸದರಿ ಸುರಂಗ ಮಾರ್ಗ ಯೋಜನೆಗೆ ಅಗತ್ಯವಿರುವ ಶೇ.40 ರಷ್ಟು ಮೊತ್ತವನ್ನು ಕರ್ನಾಟಕ ಸರ್ಕಾರದ ಗ್ಯಾರಂಟಿ ಆಧಾರದ ಮೇಲೆ ಹುಡ್ಕೋ ವತಿಯಿಂದ ಸಾಲದ ರೂಪದಲ್ಲಿ ಪಡೆಯಲು ಉದ್ದೇಶಿಸಲಾಗಿದೆ. |

. . . 2 .

| | | |
|---|---|---|
| | | ❖ ಪೂರ್ವ ಪಶ್ಚಿಮ ಕಾರಿಡಾರ್ ಯೋಜನೆಯ ಡಿಪಿಆರ್ ತಯಾರಿಕೆ ಕಾರ್ಯ ಪ್ರಗತಿಯಲ್ಲಿದ್ದು, ಇದರ ಅಂದಾಜು ಮೊತ್ತವನ್ನು ನಿರ್ಧರಿಸಬೇಕಿರುತ್ತದೆ. |
| ಈ) | ಈ ಯೋಜನೆಗಳ ಡಿ.ಪಿ.ಆರ್ ತಯಾರಿಸಲು ಯಾವ ಸಂಸ್ಥೆಗೆ ಎಷ್ಟು ಮೊತ್ತಕ್ಕೆ ವಹಿಸಿಕೊಡಲಾಗಿತ್ತು, ಯಾವ ಮಾನದಂಡವನ್ನು ಅನುಸರಿಸಿ ಈ ಸಂಸ್ಥೆಗೆ ಡಿ.ಪಿ.ಆರ್ ತಯಾರಿಸಲು ನೀಡಲಾಗಿತ್ತು; (ವಿವರ ನೀಡುವುದು) | • ಈ ಯೋಜನೆಗಳ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲು ಟೆಂಡರ್ ಮುಖಾಂತರ ಮೆ॥ ರೋಡಿಕ್ ಕನ್ಸಲ್‌ಟೆಂಟ್ ಪ್ರೈವೇಟ್ ಲಿಮಿಟೆಡ್, ನವದೆಹಲಿ ರವರಿಗೆ ನೀಡಲಾಗಿದೆ.<br>• ಉತ್ತರ – ದಕ್ಷಿಣ ಕಾರಿಡಾರ್ ಯೋಜನೆಯ ಡಿ.ಪಿ.ಆರ್ ತಯಾರಿಸಲು ರೂ.9.45 ಕೋಟಿಗಳಿಗೆ ಹಾಗೂ ಪೂರ್ವ – ಪಶ್ಚಿಮ ಕಾರಿಡಾರ್ ಯೋಜನೆಗೆ ಡಿ.ಪಿ.ಆರ್ ತಯಾರಿಸಲು ರೂ.9.89 ಕೋಟಿಗಳಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ. |
| ಉ) | ಈ ಎರಡು ಯೋಜನೆಯ ಡಿ.ಪಿ.ಆರ್ ತಯಾರಿಸುವಲ್ಲಿ ಸರ್ಕಾರ ವಹಿಸಿಕೊಟ್ಟ ಸಂಸ್ಥೆಯು ಅತ್ಯಂತ ಕಳಪೆ ಮಟ್ಟದಲ್ಲಿ ಡಿ.ಪಿ.ಆರ್ ತಯಾರಿಸಿ ನೀಡಿದ್ದು, ಸಾರ್ವಜನಿಕರ ಹಣ ನೀಡಿ ಅವ್ಯವಹಾರ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ; ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಇಲ್ಲ. |

**ನಅಇ 400 ಎಂಎನ್‌ವೈ 2025 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ